ಸರ್ಕಾರಿ ಮುದ್ರಣಾಲಯಗಳಲ್ಲಿ ಆಧುನಿಕ ಮುದ್ರಣ ತಂತ್ರಜ್ಞಾನವನ್ನು ಅಳವಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 250(441)

ಸದಸ್ಯರ ಹೆಸರು: ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ):

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮು.ಲೇ.ಸಾ. ಮತ್ತು ಪ್ರ.ಸಚಿವರು)

ಪ್ರಶ್ನೆ

ಅ) ಸರ್ಕಾರಿ ಮುದ್ರಣಾಲಯದ ವಿವಿಧ ಶಾಖೆಗಳಲ್ಲಿ ಆಧುನಿಕ ಮುದ್ರಣ ತಂತ್ರಜ್ಞಾನವನ್ನು ಅಳವಡಿಸಲು ತೆಗೆದುಕೊಂಡ ಕ್ರಮಗಳು.

ಆ) ಕಳೆದ ಮೂರು ವರ್ಷಗಳಲ್ಲಿ ಆಧುನೀಕರಣಗೊಳಿಸಲು ಮಾಡಿದ ವೆಚ್ಚವೆಷ್ಟು? ವಿವರಗಳನ್ನು ನೀಡುವುದು.

ಇ) ಹಳೆಯ ತಂತ್ರಜ್ಞಾನದ ಮುದ್ರಣ ಯಂತ್ರಗಳನ್ನು ಇನ್ನೂ ಬಳಸಲಾಗುತ್ತಿದೆಯೆ, ಇಲ್ಲವೇ? (ಅಂತಹ ಯಂತ್ರಗಳ ವಿವರಗಳನ್ನು ಒದಗಿಸುವುದು).

ಉತ್ತರ

ಅ) ಸರ್ಕಾರಿ ಮುದ್ರಣಾಲಯದ ವಿವಿಧ ಶಾಖೆಗಳಲ್ಲಿ ಆಧುನಿಕ ಮುದ್ರಣ ತಂತ್ರಜ್ಞಾನವನ್ನು ಅಳವಡಿಸಲು ಯೋಜನೆಯಡಿಯಲ್ಲಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಈ ಬಾಬ್ತು ಮಾಡಿದ ವೆಚ್ಚ ಕೆಳಕಂಡಂತಿದೆ:-

(ಲಕ್ಷ ರೂ.ಗಳಲ್ಲಿ)

1999-2000	2000-01	2001-02
80	80	103

ಇ) ಹಳೆಯ ಲೆಟರ್ ಪ್ರೆಸ್ ಮುದ್ರಣ ಯಂತ್ರಗಳು ನಂಬರಿಂಗ್, ಕ್ರೀಸಿಂಗ್, ಕವರ್ ಪಂಚಿಂಗ್ ಇತ್ಯಾದಿಗಳಿಗೆ ಬಳಕೆಯಲ್ಲಿದ್ದು, ಅವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕೆಳಕಂಡ ಹಳೆಯ ಲೆಟರ್ ಪ್ರೆಸ್ ಮುದ್ರಣ ಯಂತ್ರಗಳು ನಂಬರಿಂಗ್, ಕ್ರೀಸಿಂಗ್, ಕವರ್ ಪಂಚಿಂಗ್, ಇತ್ಯಾದಿಗಳಿಗೆ ಬಳಕೆಯಲ್ಲಿರುತ್ತವೆ.

1. ಹೈಡಲ್‌ಬರ್ಗ್ ಡಬಲ್ ಡೆಮಿ ಲೆಟರ್ ಪ್ರೆಸ್ ಮುದ್ರಣ ಯಂತ್ರಗಳು	3 ಸಂಖ್ಯೆ
2. ಹೆಚ್.ಎಂ.ಟಿ. ನೆಬೆಲಿಯೋ ಸಿಂಗಲ್ ಡೆಮಿ	1 ಸಂಖ್ಯೆ
3. ಹೆಚ್.ಎಂ.ಟಿ. ನೆಬೆಲಿಯೋ ಡೆಮಿ ಪೋಲಿಯೋ	2 ಸಂಖ್ಯೆ
4. ಗ್ರಾಫೋ	6 ಸಂಖ್ಯೆ
5. ಟ್ರೇಡಲ್	2 ಸಂಖ್ಯೆ
6. ಒಎಂ-2 ಮುದ್ರಣ ಯಂತ್ರಗಳು	3 ಸಂಖ್ಯೆ
7. ಒಸಾಕ ಮುದ್ರಣ ಯಂತ್ರಗಳು	3 ಸಂಖ್ಯೆ
8. ಮಹಬೀರ್ ಮುದ್ರಣ ಯಂತ್ರಗಳು	2 ಸಂಖ್ಯೆ